

ಸಿನಿಮಾಗಳಲ್ಲಿ ನಟಿಸತೊಡಗಿದ್ದ ಅವರಿಗೆ ಹೆಸರು ತಂದುಕೊಟ್ಟದ್ದು 'ಬ್ರಿಗ್ಟನ್ ರಾಕ್' (1947) ಚಿತ್ರದಲ್ಲಿನ ಋಣಾತ್ಮಕ ಪಾತ್ರ. 1949ರ ವೇಳೆಗೆ, ಜನಪ್ರಿಯ ಬ್ರಿಟಿಷ್ ನಟರಲ್ಲೊಬ್ಬರಾಗಿ ಅವರು ಗುರ್ತಿಸಿಕೊಂಡಿದ್ದರು. 1967 ಮತ್ತು 68– ಸತತವಾಗಿ ಎರಡು ಸಲ ಪೋಷಕ ಪಾತ್ರಗಳಿಗಾಗಿ 'ಗೋಲ್ಡನ್ ಗ್ಲೋಬ್' ಪ್ರಶಸ್ತಿ ಪಡೆದ ಅಗ್ಗಳಿಕೆ ಅವರದು.

ಹನ್ನೆರಡು ಸಿನಿಮಾಗಳ ನಿರ್ದೇಶನ, ಹದಿಮೂರು ಚಿತ್ರಗಳ ನಿರ್ಮಾಣ, ಎಪ್ಪತ್ತೆಂಟು ಚಲನಚಿತ್ರಗಳಲ್ಲಿ ನಟನೆ– ಇದು ಅಟೆನ್‌ಬರೊ ಸಿನಿಮಾ ಚರಿತ್ರೆ. 'ಕ್ಲೋಸಿಂಗ್ ದಿ ರಿಂಗ್' (2007) ಅವರ ನಿರ್ದೇಶನದ ಕೊನೆಯ ಚಿತ್ರ. ನಟರಾಗಿ ಅವರ ಕೊನೆಯ ಚಿತ್ರಗಳಲ್ಲೊಂದಾದ 'ಜುರಾಸಿಕ್ ಪಾರ್ಕ್'ನಲ್ಲಿ ಊರುಗೋಲು ಹಿಡಿದ ಥೀಮ್ ಪಾರ್ಕ್ ಡೆವಲಪರ್ ಪಾತ್ರದಲ್ಲಿನ ಅವರ ನಟನೆಯನ್ನು ಚಿತ್ರರಸಿಕರು ಮೆಚ್ಚಿಕೊಂಡಿದ್ದರು. ಅವರ ಸಾಧನೆಯನ್ನು ಗುರ್ತಿಸಿ ಬ್ರಿಟನ್ ಸರ್ಕಾರ 'ನೈಟ್‌ಹುಡ್' ಪದವಿ ನೀಡಿ ಗೌರವಿಸಿದೆ.

ನಟರಾಗಿ ಜನಮನ್ನಣೆ ಹಾಗೂ ಪುರಸ್ಕಾರಗಳನ್ನು ಗಳಿಸಿದ್ದರೂ ಅಟೆನ್‌ಬರೊ ಅವರ ಹೆಸರು ಚಲನಚಿತ್ರರಂಗದಲ್ಲಿ ಚಿರಸ್ಥಾಯಿಯಾದುದು ನಿರ್ದೇಶಕರಾಗಿ– ಮುಖ್ಯವಾಗಿ 1983ರಲ್ಲಿ ರೂಪಿಸಿದ 'ಗಾಂಧಿ' ಚಿತ್ರದ ಮೂಲಕ. 1950ರಲ್ಲಿ ತಮ್ಮದೇ ಆದ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದ ಅವರು, 'ದಿ ಆ್ಯಂಗ್ರಿ ಸೈಲೆನ್ಸ್', 'ವಿಷಲ್ ಡೌನ್ ಅಂಡ್ ವಿಂಡ್' ಸಿನಿಮಾಗಳನ್ನು ನಿರ್ಮಿಸಿದರು. 'ಓಹ್! ವಾಟ್ ಎ ಲವ್ಲಿ ವಾರ್' (1969) ನಿರ್ದೇಶಕರಾಗಿ ಅವರ ಚೊಚ್ಚಿಲ ಸಿನಿಮಾ.

ಹಾಗೆ ನೋಡಿದರೆ, ಚಾರಿತ್ರಿಕ ವ್ಯಕ್ತಿಗಳ ಕುರಿತ ಅಟೆನ್‌ಬರೊ ಅವರ ತುಡಿತ ಗಾಂಧಿಗಷ್ಟೇ ಸೀಮಿತವಾಗಿಲ್ಲ. ಚರ್ಚಿಲ್‌ರ ಕುರಿತ 'ಯಂಗ್ ವಿನ್‌ಸ್ಟನ್' (1972) ಹಾಗೂ ಚಾರ್ಲಿ ಚಾಪ್ಲಿನ್ ಬಗೆಗಿನ 'ಚಾಪ್ಲಿನ್' (1992) ಚಿತ್ರಗಳು ಕೂಡ ಚಾರಿತ್ರಿಕ ವ್ಯಕ್ತಿತ್ವಗಳೊಂದಿಗೆ ಅಟೆನ್‌ಬರೊ ನಡೆಸಿದ ಸೃಜನಶೀಲ ಪ್ರಯೋಗಗಳಾಗಿವೆ. ಐರ್ಲೆಂಡ್ ಕವಿ ಸಿ.ಎಸ್. ಲೆವಿಸ್ ಹಾಗೂ ವಿಚ್ಛೇದಿತ ಮಹಿಳೆಯೊಂದಿಗಿನ ಸಂಬಂಧದ 'ಶಾಡೊ ಲ್ಯಾಂಡ್ಸ್' ಕೂಡ ಇಂತಹುದೇ ಮತ್ತೊಂದು ಪ್ರಯತ್ನ. ಆದರೆ, ಇವೆಲ್ಲವೂ ಪ್ರಯೋಗಗಳ ರೂಪದಲ್ಲಿ ಸಹೃದಯರ ಗಮನ ಸೆಳೆದಿವೆಯೇ ಹೊರತು, ಅಪೂರ್ವ ಕಲಾಕೃತಿಗಳಾಗಿಯಲ್ಲ. ಮೈಲಿಗಲ್ಲಿನ ರೂಪದಲ್ಲಿ, ಐತಿಹಾಸಿಕ ಸೃಷ್ಟಿಯ ರೂಪದಲ್ಲಿ ಅಟೆನ್‌ಬರೊ ಅವರ ಹೆಸರನ್ನು ಅಮರಗೊಳಿಸಿರುವುದು 'ಗಾಂಧಿ' ಸಿನಿಮಾ.

'ಗಾಂಧಿ' ಸಿನಿಮಾ ಸುಮಾರು ಎರಡು ದಶಕಗಳ ಕಾಲ ಅಟೆನ್‌ಬರೊ ಕಂಡ ಒಂದು ಮಹಾಸ್ವಪ್ನ. ಗಾಂಧಿ ಅವರು ಜೀವಿಸಿದ ಅಹಿಂಸೆ, ಸತ್ಯಾಗ್ರಹಗಳನ್ನು ಅಟೆನ್‌ಬರೊ ಅದ್ಭುತವಾಗಿ ದೃಶ್ಯಕಥನವಾಗಿಸಿದರು. ಅಂದ ಹಾಗೆ, ಅವರಲ್ಲಿ 'ಗಾಂಧಿ ಕನಸು' ತುಂಬಿದವರು ಲಂಡನ್‌ನ ಭಾರತೀಯ ರಾಯಭಾರಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮೋತಿಲಾಲ್ ಕೊಠಾರಿ ಎನ್ನುವ ಗಾಂಧಿವಾದಿ. ಕೊಠಾರಿ ಅವರ ಮೂಲಕ ಗಾಂಧಿಯ ಹುಚ್ಚು ಹತ್ತಿಸಿಕೊಂಡ ಅವರು, ಭಾರತದ ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರನ್ನು ಭೇಟಿಯಾದರು. 'ಗಾಂಧಿ' ಸಿನಿಮಾ ನಿರ್ಮಾಣಕ್ಕೆ ನೆಹರೂ ಹಸಿರು ನಿಶಾನೆ ತೋರಿದ್ದಲ್ಲದೆ, ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದರು. ಆದರೆ, 1964ರಲ್ಲಿ ನೆಹರೂ ನಿಧನದೊಂದಿಗೆ ಸಿನಿಮಾ ಹಲವು ಅಡೆತಡೆ ಎದುರಿಸಿತು. ಹದಿನೆಂಟು ವರ್ಷಗಳ ಕಾಲ ಮಹಾತ್ಮನ ಕನಸನ್ನು ಜತನವಾಗಿ ಕಾಪಾಡಿಕೊಂಡ ಅಟೆನ್‌ಬರೊ, 1982ರ ನವೆಂಬರ್ 30ರಂದು ಭಾರತದಲ್ಲಿ 'ಗಾಂಧಿ' ಚಿತ್ರವನ್ನು ತೆರೆ ಕಾಣಿಸಿದರು. ನಂತರದ ಡಿಸೆಂಬರ್‌ನಲ್ಲಿ ವಿಶ್ವದ ವಿವಿಧ ಭಾಗಗಳಲ್ಲಿ ಸಿನಿಮಾ ತೆರೆ ಕಂಡಿತು.

'ಗಾಂಧಿ' ಸಿನಿಮಾ ತೆರೆ ಕಂಡು ಮೂವತ್ತೆರಡು ವರ್ಷಗಳಾಗಿವೆ. ಈಗಲೂ ಇದಕ್ಕೆ ಸರಿಸಮ ಎನಿಸುವ ಮತ್ತೊಂದು ಕಲಾಕೃತಿ ಸೃಷ್ಟಿಸಲಿಕ್ಕೆ ಚಿತ್ರಜಗತ್ತಿಗೆ ಸಾಧ್ಯವಾಗಿಲ್ಲ ಎನ್ನುವುದು ಆ ಚಿತ್ರದ ಅಗ್ಗಳಿಕೆಯಾಗಿದೆ.

ಸಿನಿಮಾದ ಜೊತೆಗೆ ಶಿಕ್ಷಣ ಹಾಗೂ ಫುಟ್‌ಬಾಲ್ ಅಟೆನ್‌ಬರೊ ಅವರ ಆಸಕ್ತಿಯ ಕ್ಷೇತ್ರಗಳಾಗಿದ್ದವು. ಜಾತಿ, ಧರ್ಮ, ಬಣ್ಣಗಳ ಹಂಗಿಲ್ಲದ ಶಿಕ್ಷಣ ಎಲ್ಲರಿಗೂ ದೊರೆಯಬೇಕು ಎನ್ನುವುದು ಅವರ ಪ್ರತಿಪಾದನೆಯಾಗಿತ್ತು. ಫುಟ್‌ಬಾಲ್ ಕ್ಲಬ್‌ಗಳೊಂದಿಗೆ ಅವರು ನಿಕಟ ನಂಟು ಹೊಂದಿದ್ದರು.

'ಗಾಂಧಿ'ಯ ಮೂಲಕ ಭಾರತೀಯರ ನೆನಪುಗಳಲ್ಲಿ ಉಳಿದ ಅಟೆನ್‌ಬರೊ ಅವರ ಕೊನೆಯ ದಿನಗಳು ಅಷ್ಟು ಹಿತಕರವಾಗಿರಲಿಲ್ಲ. ಅವರ ಪುತ್ರಿ ಹಾಗೂ ಮೊಮ್ಮಗಳು 2004ರಲ್ಲಿ ಥಾಯ್ಲೆಂಡ್ ಪ್ರವಾಸದಲ್ಲಿದ್ದಾಗ ಸಂಭವಿಸಿದ ಸುನಾಮಿಗೆ ಬಲಿಯಾಗಿದ್ದರು. ಈ ಆಘಾತವನ್ನು 'ಇದು ನನ್ನ ಬದುಕಿನ ಅತ್ಯಂತ ಕೆಟ್ಟ ದಿನ' ಎಂದು ಬಣ್ಣಿಸಿದ್ದ ಅಟೆನ್‌ಬರೊ, 2008ರಲ್ಲಿ ಹೃದ್ರೋಗಕ್ಕೆ ಒಳಗಾಗಿ ಪೇಸ್‌ಮೇಕರ್ ಅಳವಡಿಸಿಕೊಂಡಿದ್ದರು. ಮನೆಯಲ್ಲಿ ಆಯ ತಪ್ಪಿ ಬಿದ್ದು ಘಾಸಿಗೊಂಡ ನಂತರ ತಮ್ಮ ಆಸ್ತಿಯನ್ನು ಮಾರಾಟ ಮಾಡಿ 'ಕೇರ್ ಸೆಂಟರ್'ನಲ್ಲಿ ಆಶ್ರಯ ಪಡೆದಿದ್ದರು. ಅವರ ಪತ್ನಿ ಶೆಲಾ ಮರೆವಿನ ಕಾಯಿಲೆಗೊಳಗಾಗಿದ್ದು, ಕೇರ್ ಸೆಂಟರ್‌ನಲ್ಲಿ ಜೀವಿಸುತ್ತಿದ್ದಾರೆ.

ತಮ್ಮ ತೊಂಬತ್ತೊಂದನೇ ಹುಟ್ಟುಹಬ್ಬಕ್ಕೆ ಐದು ದಿನಗಳು ಬಾಕಿಯಿವೆ ಎನ್ನುವಾಗ್ಗೆ ಅಟೆನ್‌ಬರೊ ನಿಧನರಾಗಿದ್ದಾರೆ. 'ಶಾಲೆಗಳಲ್ಲಿನ ಪಠ್ಯಕ್ಕಿಂತಲೂ ಮಹಾತ್ಮನನ್ನು ನನಗೆ ಹೆಚ್ಚು ಪರಿಚಯಿಸಿದ್ದು 'ಗಾಂಧಿ' ಸಿನಿಮಾ' ಎನ್ನುವುದು ಅಟೆನ್‌ಬರೊ ಅವರ ಕುರಿತ ಎಂದು ಬಾಲಿವುಡ್ ನಟ ಅನಿಲ್ ಕಪೂರ್ ಶ್ರದ್ಧಾಂಜಲಿ. ''ಅಟೆನ್‌ಬರೊ ಮಹಾತ್ಮ ಗಾಂಧಿಯ ಮರು ಅನ್ವೇಷಕ'' ಎನ್ನುವುದು ಸಂತಾಪದ ಮತ್ತೊಂದು ಮಾತು. ಹೌದು, ಗಾಂಧಿ ಮಹಾತ್ಮನ ಕುರಿತ ಅಗಣಿತ ಬೆರಗುಗಳಲ್ಲಿ ಅಟೆನ್‌ಬರೊ ಮತ್ತವರ ಸಿನಿಮಾ ಕೂಡ ಸೇರಿದೆ. ■